# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಬಾಗಲಕೋಟೆ ಜಿಲ್ಲೆಯ ಗ್ರಾಮಗಳ ಆಯ್ಕೆ ಅನುಮೋದನೆ ಕುರಿತು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012

2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ ಇವರ ಪತ್ರದ ಸಂಖ್ಯೆ: ಜಿ.ಪಂ.ಅ/ಸು.ಗ್ರಾ.ಯೋ/5ನೇಹಂತ/ಸಿಆರ್-1/2012, ದಿನಾಂಕ: 04.09.2012.

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲಿನ ಓದಲಾಗಿದೆ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಬಾಗಲಕೋಟೆ ಜಿಲ್ಲೆಯ **6 ತಾಲ್ಲೂಕುಗಳ 58 ಗ್ರಾಮಗಳನ್ನು** ಆಯ್ಕೆ ಮಾಡಿ ಶಾಸಕರಿಂದ ಶಿಫಾರಸ್ಸು ಮಾಡಿದ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದನೆ ಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ ಅವರು ಓದಲಾಗಿದೆ(3)ರಲ್ಲಿ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಬಾಗಲಕೋಟೆ ಜಿಲ್ಲೆಯ **6 ತಾಲ್ಲೂಕುಗಳ 58 ಗ್ರಾಮಗಳನ್ನು** ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:67:ಸುಗ್ರಾಯೋ:2012. ಬೆಂಗಳೂರು, ದಿನಾಂಕ:22.09.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ **6 ತಾಲ್ಲೂಕುಗಳ 58 ಗ್ರಾಮಗಳಿಗೆ** ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.
5. ಆಯ್ಕೆಯಾದ ಗ್ರಾಮವು ಈ ಯೋಜನೆಯ ಹಿಂದಿನ ಹಂತದಲ್ಲಿ ಆಯ್ಕೆಯಾಗಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

22/9/12

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ 22/9/12

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಬಾಗಲಕೋಟೆ
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9. ಸಂಪಾದಕರು, ಕರ್ನಾಟಕ ವಿಕಾಸ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
10. ಹೆಚ್ಚುವರಿ.

ಅನುಬಂಧ

ಬಾಗಲಕೋಟೆ ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆ – ಅನುಮೋದಿತ ಗ್ರಾಮಗಳ ಪಟ್ಟಿ

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:67:ಸುಗ್ರಾಯೋ:2012, ದಿನಾಂಕ:22.09.2012

ಜಿಲ್ಲೆ: ಬಾಗಲಕೋಟೆ

| ಕ್ರ.ಸಂ. | ತಾಲ್ಲೂಕು | ಕ್ರ.ಸ | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ತಾಲ್ಲೂಕುವಾರು ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಬಾದಾಮಿ | 1 | ಹಂಗರಗಿ | 1946 | 47.58 |
| | | 2 | ಕಂಕನಕೊಪ್ಪ | 1695 | 41.44 |
| | | 3 | ಗೋವನಕೊಪ್ಪ | 1459 | 35.67 |
| | | 4 | ಉಗಲವಾಟ | 2190 | 53.55 |
| | | 5 | ತೋಗುನಸಿ | 1887 | 46.14 |
| | | 6 | ಕೇಂದುರ | 2473 | 60.47 |
| | | 7 | ಯರಗೋಪ್ಪಾ ಎಸ್.ಬಿ | 2836 | 69.34 |
| | | 8 | ಬಿ.ಎನ್.ಜಾಲಿಹಾಳ | 1531 | 37.43 |
| | | 9 | ಬಾಚನಗುಡ್ಡ | 1576 | 38.54 |
| | | 10 | ಕಿತ್ತಲಿ | 1824 | 44.60 |
| | | 11 | ಹಲಕುರ್ಕಿ | 3772 | 92.23 |
| | | 12 | ಕಲಬಂದಕೇರಿ | 997 | 24.38 |
| | | 13 | ಫಕಿರ ಬುದಿಹಾಳ | 606 | 14.82 |
| | | 14 | ಸಾಗನೂರ | 401 | 9.80 |
| | | | **ಒಟ್ಟು** | **25193** | **616.00** |
| 2 | ಬಾಗಲಕೋಟೆ | 1 | ಭಗವತಿ | 2564 | 60.23 |
| | | 2 | ರಾಂಪುರ | 3951 | 92.80 |
| | | 3 | ಭ್ಯೆರಮಟ್ಟಿ | 1477 | 34.69 |
| | | 4 | ಅಚನೂರ | 2051 | 48.18 |
| | | 5 | ಸುತಗುಂಡಾರ | 1937 | 45.50 |
| | | 6 | ಖಜ್ಜಿಡೋನಿ | 2575 | 60.48 |
| | | 7 | ಚಿಕ್ಕಶಲ್ಲಿಕೇರಿ | 1639 | 38.50 |
| | | 8 | ಸಿಮೀಕೇರಿ | 2879 | 67.62 |
| | | | **ಒಟ್ಟು** | **19073** | **448.00** |
| 3 | ಬೀಳಗಿ | 1 | ಗಿರಿಸಾಗರ | 6420 | 169.67 |
| | | 2 | ಬಿಸನಾಳ | 2844 | 75.16 |
| | | 3 | ಲಿಂಗಾಪುರ ಎಸ್.ಕೆ | 805 | 21.28 |
| | | 4 | ಕೋಂತಿಕಲ್ಲ | 790 | 20.88 |
| | | 5 | ಜಾನಮಟ್ಟಿ | 2876 | 76.01 |
| | | | **ಒಟ್ಟು** | **13735** | **363.00** |

| | | | | | |
|---|---|---|---|---|---|
| 4 | ಹುನಗುಂದ | 1 | ಹಿರೇ ಓತಗೇರಿ | 1357 | 35.00 |
| | | 2 | ಚಿಕ್ಕ ಓತಗೇರಿ | 927 | 23.91 |
| | | 3 | ಮುರಡಿ | 2265 | 58.42 |
| | | 4 | ಇಲಾಳ | 1450 | 37.40 |
| | | 5 | ಹುಲಗಿನಾಳ | 1749 | 45.11 |
| | | 6 | ಭೀಮನಗಡ | 1427 | 36.81 |
| | | 7 | ರಕ್ಕಸಗಿ | 1829 | 47.17 |
| | | 8 | ಹೆರೂರ | 1545 | 39.85 |
| | | 9 | ರಾಮವಾಡಗಿ | 1217 | 31.39 |
| | | 10 | ಬೇನಕನ ಡೋಣಿ | 836 | 21.56 |
| | | 11 | ಘಟ್ಟಿಗನೂರ | 1157 | 29.84 |
| | | 12 | ಮರಟಗೇರಿ | 1788 | 46.12 |
| | | 13 | ಹಿರೇ ಕೋಡಗಲಿ | 2245 | 57.90 |
| | | 14 | ಅಂಬಲಿಕೊಪ್ಪ | 754 | 19.45 |
| | | 15 | ಕಡಿವಾಲ ಕಲ್ಲಾಪುರ | 775 | 19.99 |
| | | 16 | ಯರನಾಯಕನಾಳ | 448 | 11.55 |
| | | 17 | ಮುಳ್ಳೂರ | 990 | 25.53 |
| | | 18 | ಹುವಿನಹಳ್ಳಿ | 1357 | 35.00 |
| | | | **ಒಟ್ಟು** | **24116** | **622.00** |
| 5 | ಜಮಖಂಡಿ | 1 | ಅಡಿಹುಡಿ | 4186 | 108.41 |
| | | 2 | ಕಲ್ಲಬೀಳಗಿ | 1913 | 49.54 |
| | | 3 | ಹುಲ್ಯಾಳ | 4321 | 111.91 |
| | | 4 | ಕೋಣ್ಣೂರ | 7274 | 188.38 |
| | | 5 | ಬುದ್ನಿ | 1158 | 29.99 |
| | | 6 | ಹನಗುಂಡಿ | 5504 | 142.54 |
| | | 7 | ಯಲ್ಲಟ್ಟಿ | 3018 | 78.16 |
| | | 8 | ಮದನಮಟ್ಟಿ | 1045 | 27.06 |
| | | | **ಒಟ್ಟು** | **28419** | **736.00** |
| 6 | ಮುಧೋಳ | 1 | ಕಸಬಾಜಂಬಗಿ | 2768 | 65.78 |
| | | 2 | ರೂಗಿ | 2280 | 54.18 |
| | | 3 | ಬೆಳಗಲಿ | 15041 | 357.44 |
| | | 4 | ಸಂಗಾನಟ್ಟಿ | 1975 | 46.94 |
| | | 5 | ನಂದಗಾಂವ | 2300 | 54.66 |
| | | | **ಒಟ್ಟು** | **24364** | **579.00** |
| | | | **ಜಿಲ್ಲೆಯ ಒಟ್ಟು ಮೊತ್ತ** | **134900** | **3364.00** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸುಗ್ರಾಯೋ) ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ